**ಸಾಕ್ಷಿಯನ್ನು ದಿಃ *22/08/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಎ.ಎಸ್.ಶಿಂಧೆ ವಕೀಲರಿಂದ ಎದುರುದಾರರ ಪರವಾಗಿ.**

ನಿ.ಪಿ.9 ರಂತೆ ಇರುವ ದಾಖಲೆಯನ್ನು ಸರಕಾರ ನೇರವಾಗಿ ನ್ಯೂನತೆ ಇರುವವರ ಮನೆ ವಿಳಾಸಕ್ಕೆ ಕಳಿಸಿರುತ್ತಾರೆ, ಅದನ್ನು ನಾವು ನೇರವಾಗಿ ಒದಗಿಸಿವುದಿಲ್ಲ.

ದಿಃ05-02-2024 ರಂದು ಗಾಯಾಳು ನಮ್ಮ ಜಿಲ್ಲಾ ಆಸ್ಪತ್ರೆಗೆ ಬಂದಿದ್ದು, ಅವರನ್ನು ತಪಾಸಣೆ ಮಾಡಿರುತ್ತೇವೆ, ಅದರ ವಿವರಗಳನ್ನು ಸಹ ಸಲ್ಲಿಸಿರುತ್ತೇವೆ. ಎಸಡಿಎಂ ಆಸ್ಪತ್ರೆಯವರು ನೀಡಿರುವ ಡಿಸಚಾರ್ಜ ಸಮರಿ ಮತ್ತು ನಾವು ದೈಹೀಕ ಮತ್ತು ಇತರೇ ತಪಾಸಣೆಗಳನ್ನು ತುಲನೆ ಮಾಡಿ ನೋಡಿರುತ್ತೇವೆ. ಎಸಡಿಎಂ ಆಸ್ಪತ್ರೆಯವರು ನೀಡಿರುವ ಡಿಸಚಾರ್ಜ ಸಮರಿಯಲ್ಲಿ ನ್ಯೂನತೆ ಪ್ರತಿಶತ ಉಲ್ಲೇಖ ಮಾಡಿರುವುದಿಲ್ಲ. ಗಾಯಾಳುವಿಗೆ ಚಿಕಿತ್ಸೆ ನೀಡಿರುವ ವೈದ್ಯರೇ ಅಂಗನ್ಯೂನತೆ ಪ್ರಮಾಣಪತ್ರ ಒದಗಿಸಬಹುದು ಎಂದರೆ ಇರಬಹುದು.

ಗಾಯಾಳುವಿಗೆ 60 ಪ್ರತಿಶತ ಇದ್ದದು ಬಲಗಾಲಿನ ಆ್ಯಂಪುಟೇಶನ ಆಗಿರುವ ಲೆಕ್ಕಾಚಾರ ಇರುತ್ತದೆ. ಸದರಿ 60 ಪ್ರತಿಶತ ಸಂಪೂರ್ಣ ಶರೀರದ ಮೇಲೆ ಬಿಳುವುದಿಲ್ಲ ಎಂದರೆ ನಿಜ. ಆದ್ದರಿಂದ 60 ಪ್ರತಿಶತ ಸಂಪೂರ್ಣ ಶರೀರಕ್ಕೆ ಹೋಲುತ್ತದೆ ಎಂದು ನೀಡಿರುವ ಪ್ರಮಾಣಪತ್ರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಗಾಯಾಳುವಿಗೆ ದೈಹೀಕ ಮತ್ತು ಇತರೇ ತಪಾಸಣೆ ಮಾಡದೇ ಮತ್ತು ಎಸಡಿಎಂ ಆಸ್ಪತ್ರೆಯರು ನೀಡಿರುವ ದಾಖಲೆ ನೋಡದೆ ಗಾಯಾಳುವಿಗೆ ಅನುಕೂಲವಾಗುವ ರೀತಿ ಪರಿಹಾರಣ ಹಣ ಸಿಗಲಿ ಎಂದು ಅವರಿಗೆ ಸುಳ್ಳು ಅಂಗನ್ಯೂನತೆ ಪ್ರಮಾಣಪತ್ರ ಒದಗಿಸಿರುತ್ತೇವೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಪಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.